5

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ನಂ. 132. ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು – 560 027

---

**ಸಂಖ್ಯೆ : ಸುತ್ತೋಲೆ/ಆ–1/2006–07**

**ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ**
**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ**

**ವಿಷಯ : ವರ್ಷಾಂತ್ಯದ ಆರ್ಥಿಕ ಮಾಹಿತಿ ಕಳುಹಿಸುವ ಹಾಗೂ ಇತರೆ ಸಂಗತಿಗಳ ಕುರಿತು ಮಾರ್ಗಸೂಚಿ.**

## 1. ಆರ್ಥಿಕ ಅಂಕಿ ಅಂಶಗಳನ್ನು ಕಳುಹಿಸುವುದು :

ಆರ್ಥಿಕ ವರ್ಷಾಂತ್ಯದ ತಮ್ಮ ಸಹಕಾರಿಯ ಅಂಕಿ ಅಂಶಗಳನ್ನು ನಮೂನೆ 1 ರಲ್ಲಿ ಇರುವ ಮಾದರಿಯಲ್ಲಿ ಪ್ರತಿ ವರ್ಷ ಏಪ್ರಿಲ್ 30ರೊಳಗಾಗಿ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ. ಈ ವಿವರಗಳನ್ನು ಕಳುಹಿಸಲು ಲೆಕ್ಕ ಪರಿಶೋಧನೆಗಾಗಿ ಕಾಯದೇ ಏಪ್ರಿಲ್ 30ರೊಳಗಾಗಿಯೇ ಕಳುಹಿಸಲು ಸೂಚಿಸಲಾಗಿದೆ.

## 2. ಶಾಸನಬದ್ಧ ಲೆಕ್ಕ ಪರಿಶೋಧನೆ :

ಅ) ಲೆಕ್ಕ ಪರಿಶೋಧನೆಯನ್ನು ಸಂಯುಕ್ತ ಸಹಕಾರಿ ನೀಡಿದ ಮಾರ್ಗ ಸೂಚಿಯಂತೆ ಮಾಡಲು ಲೆಕ್ಕ ಪರಿಶೋಧಕರಿಗೆ ಸೂಚಿಸುವುದು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಆ) ಸಂಯುಕ್ತ ಸಹಕಾರಿ ಪ್ರಕಟಿಸಿದ ಪಟ್ಟಿಯಲ್ಲಿರುವ ಲೆಕ್ಕ ಪರಿಶೋಧಕರನ್ನೇ ಸಹಕಾರಿಗಳು ಲೆಕ್ಕ ಪರಿಶೋಧಕರನ್ನಾಗಿ ನೇಮಿಸಿಕೊಂಡಿರಬೇಕು. ಪಟ್ಟಿಯಲ್ಲಿಲ್ಲದವರು ಮಾಡಿದ ಲೆಕ್ಕ ಪರಿಶೋಧನೆಯನ್ನು ಅಸಿಂಧು ಎಂದು ಪರಿಗಣಿಸಲಾಗುವುದು.

ಇ) ಮಾರ್ಗಸೂಚಿಯಂತಿರದ ವರದಿಗಳನ್ನು ಸಹಕಾರಿಗಳಿಗೆ ವಾಪಸ್ಸು ಕಳುಹಿಸಿ ಪುನರ್ ಲೆಕ್ಕ ಪರಿಶೋಧನೆಗೆ ಸಂಯುಕ್ತ ಸಹಕಾರಿ ಸೂಚಿಸಲೂಬಹುದು. ಅಂತಹ ಪರಿಸ್ಥಿತಿ ಬಾರದಂತೆ ಮಾರ್ಗಸೂಚಿಯಂತೆ ಲೆಕ್ಕ ಪರಿಶೋಧನೆ ಮಾಡಿಸುವತ್ತ ಅಗತ್ಯ ಗಮನ ನೀಡಲು ತಮಗೆ ಸೂಚಿಸಲಾಗಿದೆ.

ಉ) ಮಾರ್ಚ್ 31, ರೊಳಗೆ ನೋಂದಾಯಿತವಾದ ಎಲ್ಲಾ ಸಹಕಾರಿಗಳೂ ಲೆಕ್ಕ ಪರಿಶೋಧನೆ ಮಾಡಿಸಲೇಬೇಕು. ಯಾವುದೇ ಕಾರಣಕ್ಕೂ ವಿನಾಯಿತಿ ನೀಡಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಮಾರ್ಚ್ 31, ರೊಳಗೆ ವ್ಯವಹಾರ ಆರಂಭಿಸದ ಸಹಕಾರಿಗಳೂ ಸಹ ತಮ್ಮ ಆರ್ಥಿಕ ವಿವರ ಪಟ್ಟಿಗಳನ್ನು ಸನ್ನದು ಲೆಕ್ಕ ಪರಿಶೋಧಕರಿಂದ ದೃಢೀಕರಿಸತಕ್ಕದ್ದು.

ಊ) ಪರಿವರ್ತಿತ ಸಹಕಾರಿಗಳು ಪರಿವರ್ತನೆಯ ಸಂದರ್ಭದಲ್ಲಿ ಲೆಕ್ಕಪರಿಶೋಧನಾ ಇಲಾಖೆಯ ಕಡೆಯಿಂದ ಲೆಕ್ಕ ಪರಿಶೋಧನೆ ಆರಂಭಗೊಂಡಿದ್ದಲ್ಲಿ ಮಾತ್ರ ಅವರು ತಯಾರಿಸಿದ ವರದಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸಬಹುದು. ಪರಿವರ್ತನೆಯಾದ ನಂತರ ಎಷ್ಟೇ ವರ್ಷದ ಲೆಕ್ಕ ಪರಿಶೋಧನೆ ಬಾಕಿ ಇದ್ದರೂ ಅದನ್ನು ಸಂಯುಕ್ತ ಸಹಕಾರಿ ತಯಾರಿಸಿದ ಪಟ್ಟಿಯಲ್ಲಿದ್ದ ಲೆಕ್ಕ ಪರಿಶೋಧಕರಿಂದಲೇ ಮಾಡಿಸತಕ್ಕದ್ದು.

ಋ) ಲೆಕ್ಕ ಪರಶೋಧನಾ ವರದಿಗಳನ್ನು ಆಗಸ್ಟ್ 30ರೊಳಗೆ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಕಳುಹಿಸತಕ್ಕದ್ದು. ಈ ದಿನಾಂಕವನ್ನು ವಿಸ್ತರಿಸಲು ಕಾಯ್ದೆಯಲ್ಲಿ ಯಾವುದೇ ಅವಕಾಶವಿರುವುದಿಲ್ಲ.

ಋ) ನಿಗದಿತ ಸಮಯದಲ್ಲಿ ಲೆಕ್ಕ ಪರಿಶೋಧನೆ ಮಾಡಿಸದ ಸಹಕಾರಿಗಳ ಆಡಳಿತ ಮಂಡಳಿಯ ಎಲ್ಲಾ ಸದಸ್ಯರೂ ಕಾಯ್ದೆ ಕಲಂ 25 (2) (ಬಿ) ಅಡಿ ಮುಂದಿನ 5 ವರ್ಷಗಳವರೆಗೆ ಆ ಸಹಕಾರಿಯ ಮತ್ತು ಇತರೆ ಯಾವುದೇ ಸಹಕಾರಿಯ ನಿರ್ದೇಶಕರಾಗಲು ಅನರ್ಹಗೊಳ್ಳುತ್ತಾರಲ್ಲದೇ ಆ ಸಹಕಾರಿಗೆ ಸಂಯುಕ್ತ ಸಹಕಾರಿಯು ಕೂಡಲೇ ಆಡಳಿತಾಧಿಕಾರಿಗಳನ್ನು ನೇಮಿಸಲು ಸೂಕ್ತ ಕ್ರಮ ಜರುಗಿಸುತ್ತದೆ.

ಎ) ಲೆಕ್ಕ ಪರಿಶೋಧಕರು ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಉಪಸ್ಥಿತರಿರತಕ್ಕದ್ದು. ಅವರ ಸಹಿಯನ್ನು ಹಾಜರಾತಿ ಪುಸ್ತಕದಲ್ಲಿ ಪಡೆಯತಕ್ಕದ್ದು ಮತ್ತು ಹಾಜರಾತಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

## 3. ಸಾಮಾನ್ಯ ಸಭೆ

ಅ) ಪ್ರತಿ ವರ್ಷ ಸೆಪ್ಟೆಂಬರ್ 30ರೊಳಗಾಗಿ ಎಲ್ಲಾ ಸಹಕಾರಿಗಳೂ ತಮ್ಮ ಸಾಮಾನ್ಯ ಸಭೆ ನಡೆಸತಕ್ಕದ್ದು.

ಆ) ಸಾಮಾನ್ಯ ಸಭೆ ಎದುರು ಹಿಂದಿನ ಸಾಲಿನ ಪರಿಶೋಧಿತ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸತಕ್ಕದ್ದು.

ಇ) ಮುಂದಿನ ಸಾಲಿಗೆ ಲೆಕ್ಕ ಪರಿಶೋಧಕರನ್ನು ಸಾಮಾನ್ಯ ಸಭೆಯಲ್ಲಿಯೇ ನೇಮಿಸತಕ್ಕದ್ದು. ಕೆಲವು ಸಹಕಾರಿಗಳ ಸಾಮಾನ್ಯ ಸಭೆಯಲ್ಲಿ ಲೆಕ್ಕ ಪರಿಶೋಧಕರ ನೇಮಕದ ವಿಷಯವನ್ನು ಸಾಮಾನ್ಯ ಸಭೆ ಆಡಳಿತ ಮಂಡಳಿಗೆ ವಹಿಸಿಕೊಟ್ಟು ನಿರ್ಣಯ ಮಾಡಿರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿದೆ. ಹಾಗೆ ಮಾಡಲು ಕಾಯ್ದೆಯಲ್ಲಿ ಅವಕಾಶವಿಲ್ಲ. ಮುಂದಿನ ಸಾಲಿಗೆ ಲೆಕ್ಕ ಪರಿಶೋಧಕರನ್ನು ಸಂಯುಕ್ತ ಸಹಕಾರಿ ತಯಾರಿಸಿದ ಪಟ್ಟಿಯಲ್ಲಿರುವವರನ್ನು ಸಾಮಾನ್ಯ ಸಭೆಯೇ ನೇಮಕ ಮಾಡತಕ್ಕದ್ದು. ಹಾಗೆ ನೇಮಕಗೊಂಡ ಲೆಕ್ಕ ಪರಿಶೋಧಕರಿಗೆ ಸಾಮಾನ್ಯ ಸಭೆಯ ಮುಗಿದು 15 ದಿನಗಳಲ್ಲಿ ಅಥವಾ ಅಕ್ಟೋಬರ್ 15ರೊಳಗೆ ಇವುಗಳಲ್ಲಿ ಯಾವುದು ಮೊದಲೋ ಆ ದಿನದೊಳಗೆ ನೇಮಕಾತಿ ಪತ್ರ ನೀಡತಕ್ಕದ್ದು. ಅಂತಹ ಪತ್ರದ ಪ್ರತಿಯನ್ನು ಸಂಯುಕ್ತ ಸಹಕಾರಿಗೂ ಸಹ ಕಳುಹಿಸತಕ್ಕದ್ದು.

ಈ) ಸಾಮಾನ್ಯ ಸಭೆಯ ನೋಟೀಸಿನಲ್ಲಿ ಸದಸ್ಯರು ಮೂರು ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಒಂದು ಸಾಮಾನ್ಯ ಸಭೆಗೆ ಹಾಜರಾಗದಿದ್ದರೆ ಮತ್ತು ಕನಿಷ್ಠ ವ್ಯವಹಾರ ಮಾಡದಿದ್ದರೆ ಸದಸ್ಯತ್ವ ಕಳೆದುಕೊಳ್ಳುತ್ತಾರೆಂಬ ಸಂಗತಿಯನ್ನು ಪ್ರಮುಖವಾಗಿ ಕಾಣುವಂತೆ ಪ್ರಕಟಿಸತಕ್ಕದ್ದು.

ಉ) ಸಾಮಾನ್ಯ ಸಭೆಯ ನೋಟೀಸಿನ ಪ್ರತಿಯೊಂದನ್ನು ಸದಸ್ಯರಿಗೆ ಕಳುಹಿಸುವಾಗ ಸಂಯುಕ್ತ ಸಹಕಾರಿಗೂ ಕಳುಹಿಸತಕ್ಕದ್ದು.

ಊ)ಸಾಮಾನ್ಯ ಸಭೆ ಮುಗಿದ ಒಂದು ವಾರದಲ್ಲಿ ನಡವಳಿಕೆಗಳನ್ನು ಸಂಯುಕ್ತ ಸಹಕಾರಿಯ ಕಛೇರಿಗೆ ಕಳುಹಿಸತಕ್ಕದ್ದು.

4. ವರ್ಷದ ಪ್ರಥಮ ಮಂಡಳಿಯ ಸಭೆಯಲ್ಲಿ ಸಹಕಾರಿಯ ನಿರ್ದೇಶಕರು ಬಹಿರಂಗಪಡಿಸಬೇಕಾದ ವಿಷಯ :

ಅ) ಎಲ್ಲಾ ಸೌಹಾರ್ದ ಸಹಕಾರಿಗಳ ನಿರ್ದೇಶಕರು ತಮ್ಮ ಸಹಕಾರಿಯ ಪ್ರತಿ ಸಹಕಾರಿ ವರ್ಷದ ಮೊದಲನೆಯ ಆಡಳಿತ ಮಂಡಳಿಯ ಸಭೆಯಲ್ಲಿ ತಮ್ಮ ಹಾಗೂ ತಮ್ಮ ಹತ್ತಿರದ ಸಂಬಂಧಿಗಳ ವ್ಯವಹಾರ ಹಾಗೂ ಆಸಕ್ತಿ ಇರುವ ಸಂಸ್ಥೆಗಳ ವಿವರ ಮತ್ತು ಪದಾಧಿಕಾರಿಗಳಾಗಿರುವ ಸಂಸ್ಥೆಗಳ ವಿವರಗಳನ್ನು ಬಹಿರಂಗಗೊಳಿಸತಕ್ಕದ್ದು. ಅಂತಹ ವಿವರಗಳನ್ನು ಮಂಡಳಿಯ ಸಭೆಯ ನಡವಳಿಕೆಗಳಲ್ಲಿ ದಾಖಲಿಸತಕ್ಕದ್ದು.

**ವಿವರಣೆ :** ಅ) ಹತ್ತಿರದ ಸಂಬಂಧಿ ಎಂದರೆ : ಹೆಂಡತಿ / ಗಂಡ, ಮಗ, ಮಗಳು, ಮಗಳ ಗಂಡ, ತಂದೆ ತಾಯಿ, ಅಣ್ಣ, ತಮ್ಮ, ಅಣ್ಣನ ಹೆಂಡತಿ, ತಮ್ಮನ ಹೆಂಡತಿ / ಸೊಸೆ (ಮಗನ ಹೆಂಡತಿ)

ಆ) ಮೇಲ್ಕಾಣಿಸಿದ್ದರಲ್ಲಿ ವರ್ಷದ ಮಧ್ಯೆ ಯಾವುದೇ ಹೊಸ ಸೇರ್ಪಡೆಯಾದಲ್ಲಿ ಸೇರ್ಪಡೆಯಾದ ದಿನದ ನಂತರ ಕೂಡಲೇ ನಡೆಯುವ ಆಡಳಿತ ಮಂಡಳಿಯ ಸಭೆಯಲ್ಲಿ ಅಂತಹ ವಿವರವನ್ನು ಬಹಿರಂಗಪಡಿಸತಕ್ಕದ್ದು.

## 5. ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ

ಅ) ತಮ್ಮ ಸಹಕಾರಿಯ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಲು ಕೋರಿಕೆ ಬಂದ ಕೂಡಲೇ ಪಾವತಿಸಲು ಸೂಕ್ತ ಗಮನ ನೀಡಲೂ ಕೋರಲಾಗಿದೆ.

ಆ) ನಿಗದಿತ ಸಮಯದಲ್ಲಿ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಿ ಮುಂದಿನ ದಿನದಲ್ಲಿ ನಿಮ್ಮ ಸಹಕಾರಿಯು ವಿವಿಧ ಅನರ್ಹತೆ ಗೊಳಗಾಗುವುದನ್ನು ತಪ್ಪಿಸಿ.

## 6. ವರ್ಷದ ಅರ್ಹ ಮತದಾರರ ಪಟ್ಟಿ ಪ್ರಕಟಿಸಿ :

ಅ) ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 32 (1) (ಡಿ) ಅಡಿ ಪ್ರಸಕ್ತ ವರ್ಷದ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವುದು ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಜವಾಬ್ದಾರಿಯಾಗಿರುತ್ತದೆ ಏಪ್ರಿಲ್ 30ರೊಳಗೆ ಅಂತಹ ಪಟ್ಟಿಯನ್ನು ಪ್ರಕಟಿಸಲು ಸೂಚಿಸಲಾಗಿದೆ.

ಆ) ಹಿಂದಿನ ಮೂರು ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಒಂದು ಸಾಮಾನ್ಯ ಸಭೆಗೆ ಹಾಜರಾಗದ ಹಾಗೂ ಉಪವಿಧಿಗಳಲ್ಲಿ ನಿಗದಿಪಡಿಸಿದ ಕನಿಷ್ಠ ವ್ಯವಹಾರವನ್ನು ಮಾಡದ ಸದಸ್ಯರನ್ನು ಆಯಾ ವರ್ಷವೇ ತೆಗೆದು ಹಾಕುವ ಕ್ರಮ ಕೈಗೊಳ್ಳಲೂ ಈ ಮೂಲಕ ಸೂಚಿಸಲಾಗಿದೆ.

ಈ ಮಾರ್ಗಸೂಚಿಯನ್ನು ಕಾಯ್ದೆ ಕಲಂ 53 (7) (ಎ) ಅಡಿ ನೀಡಲಾಗಿದ್ದು ಇದರ ಉಲ್ಲಂಘನೆಯನ್ನು ಕಾಯ್ದೆ ಕಲಂ 38 ಹಾಗೂ 68 ರಡಿ ಕ್ರಮ ಜರುಗಿಸಲು ಅರ್ಹ ಪ್ರಕರಣವೆಂದು ಪರಿಗಣಿಸಲಾಗುವುದು.

ಸಹಿ /–

**(ಅನೂಪ ದೇಶಪಾಂಡೆ)**

ವ್ಯವಸ್ಥಾಪಕ ನಿರ್ದೇಶಕ